ಅಭ್ಯಾಸವಿರುತ್ತದೆ, ಆ ವಯಸ್ಸಿಗೆ ಹೋದಾಗ ನಾನು ಸಹ ಬೇಗನೆ ಏಳುತ್ತೇನೆ ಎಂದು ಯೋಚಿಸುತ್ತಿದ್ದೆ. ಆದರೆ ಈಗ ನನ್ನ ವಯಸ್ಸು ಐವತ್ತೆರಡು, ಈಗಲೂ ಸಹ ನಾನು ಬೆಳಿಗ್ಗೆ ಒಮ್ಮೆಲೆ ಏಳಲಾರೆ. ಒಂದು ವೇಳೆ ನೌಕರಿಗೆ ಅಥವಾ ಬೇರೆಡೆಗೆ ಹೋಗದಿದ್ದಾಗ ಒಂಬತ್ತು ಹತ್ತು ಗಂಟೆಯವರೆಗೆ ನಿದ್ರಿಸುತ್ತೇನೆ.

ಸರಿ, ಅಮ್ಮ ಎದ್ದರೆ ಮನೆಯೆಲ್ಲಾ ಎಚ್ಚರಗೊಳ್ಳುತ್ತದೆ. ನಾನು ಸಹ ಏಳು ಗಂಟೆಗೆ ಹಾಸಿಗೆಯಿಂದ ಎದ್ದು ಡೈನಿಂಗ್ ರೂಮಿಗೆ ಬಂದೆ. ಅಮ್ಮ ನನ್ನನ್ನು ನೋಡಿ ಹೇಳಿದಳು, 'ಪಾಲ್, ನಾನು ವಾಶಿಂಗ್ ಮೆಷಿನ್ ಹಾಕ್ತಿದ್ದೇನೆ, ನಿನ್ನ ಬಟ್ಟೆ ಒಗೆಯುವುದಿದೆಯೇ?'

ನನಗೆ ನೆನಪಾಯಿತು. ನಾವು ಚಿಕ್ಕವರಾಗಿದ್ದಾಗ ಅಮ್ಮ ನಮ್ಮ ಕೊಳಕು ಬಟ್ಟೆಗಳನ್ನು ಒಗೆದು, ಒಣಗಿಸಿ, ಇಸ್ತ್ರಿ ಮಾಡಿ ಒಂದು ಬುಟ್ಟಿಯಲ್ಲಿಟ್ಟುಕೊಂಡು ನಮ್ಮ ಕೋಣೆಯ ಬಳಿಗೆ ಬಂದು, ಅಲ್ಲಿಂದಲೇ ಅಗಸಗಿತ್ತಿಯಂತೆ ಕರೆಯುತ್ತಿದ್ದಳು, 'ಲಾಂಡ್ರಿ ಪ್ಲೀಸ್!' ನಾವು ನಮ್ಮ ನಮ್ಮ ಬಟ್ಟೆಗಳನ್ನು ಬುಟ್ಟಿಯಿಂದ ತೆಗೆದುಕೊಳ್ಳುತ್ತಿದ್ದೆವು. ಅಮ್ಮ ಒಂದು ಕೋಣೆಯ ನಂತರ ಇನ್ನೊಂದು ಕೋಣೆಗೆ ಹೋಗುತ್ತಿದ್ದಳು, ಕಡೆಗೆ ಬುಟ್ಟಿಯನ್ನು ಖಾಲಿ ಮಾಡಿ, ಬುಟ್ಟಿಯನ್ನಿಡಲು ಲಾಂಡ್ರಿ ರೂಮಿಗೆ ಹೊರಟು ಹೋಗುತ್ತಿದ್ದಳು.

ನಾನು ಸೂಟ್‌ಕೇಸಿನಿಂದ ನನ್ನ ಕೊಳಕು ಬಟ್ಟೆಗಳನ್ನು ತೆಗೆದು ಅಮ್ಮನಿಗೆ ಕೊಟ್ಟೆ. ಅಮ್ಮ ಅವುಗಳನ್ನು ವಾಶಿಂಗ್ ಮೆಷಿನ್‌ಗೆ ಹಾಕಲು ಲಾಂಡ್ರಿ ರೂಮಿಗೆ ಹೋದಳು. ನಾನು ಕಿಚನ್‌ನಲ್ಲಿ ಅಡುಗೆ ಮಾಡಲು ಆರಂಭಿಸಿದೆ.

ಅಮ್ಮನೊಂದಿಗೆ ಕೂತು ಕಾಫಿ ಕುಡಿಯುವಾಗ ಸಾಕಷ್ಟು ಮಾತುಕತೆಗಳು ನಡೆದವು. ಮನೆ ಮಾರುವುದು ಮುಖ್ಯ ವಿಷಯವಾಗಿತ್ತು. ಅಮ್ಮ ಹೇಳಿದಳು, 'ವಿಲಿಯಮ್, ಜೂಲಿಯಾ ಮತ್ತು ಅಲ್ಬರ್ಟ್ ಇವರಲ್ಲಿ ಯಾರಿಗೂ ಈ ಮನೆಯಲ್ಲಿರುವುದು ಇಷ್ಟವಿಲ್ಲ. ಇಷ್ಟು ದೊಡ್ಡ ಮನೆಯನ್ನಿಟ್ಟುಕೊಳ್ಳುವುದು ದುಬಾರಿಯೂ ಹೌದು.'

ಮನೆ ಮಾರಾಟವಾದರೆ ಅಮ್ಮ ಎಲ್ಲಿರುವುದು ಎಂಬುದು ಪ್ರಶ್ನೆಯಾಗಿತ್ತು. ಅಮ್ಮ ಹೇಳಿದಳು, 'ನಾನು ಕೆಮರನ್ ಪರಿವಾರಕ್ಕೆ ಅಪಾರ್ಟ್‌ಮೆಂಟ್ ಖಾಲಿ ಮಾಡಲು ಹೇಳಿದ್ದೇನೆ...'

ಅಪ್ಪ ಬಹಳ ವರ್ಷಗಳ ಹಿಂದೆ ಗ್ಲಾಸ್ಗೋದಲ್ಲಿ ಒಂದು ಅಪಾರ್ಟ್‌ಮೆಂಟ್ ಖರೀದಿಸಿದ್ದರು; ಅದನ್ನು ಸದಾ ಬಾಡಿಗೆಗೆ ಕೊಡುತ್ತಿದ್ದರು. ಈಚೆಗೆ ಅಲ್ಲೊಂದು ಕೆಮರನ್ ಪರಿವಾರವಿತ್ತು. ವಂಶ ಪರಂಪರಾಗತ ಮನೆಯನ್ನು ಮಾರಿದ ನಂತರ ತಾನು ಅಲ್ಲಿಗೆ ಶಿಫ್ಟ್ ಆಗುವುದಾಗಿ ಅಮ್ಮ ಹೇಳುತ್ತಿದ್ದಳು. ಅಮ್ಮ ತನ್ನ ಜೀವನದ ಬಗ್ಗೆ ಯೋಚಿಸಿದ್ದಳು. ಅವರು ತಮ್ಮ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಅವಳು ತನ್ನ ಮಕ್ಕಳನ್ನು ಅವಲಂಬಿಸಿರಲಿಲ್ಲ.

ನಾನು ಹಗಲಿಡೀ ಇಬ್ಬರು ಮೂವರು ಪ್ರಾಪರ್ಟಿ ಡೀಲಿಂಗ್ ಏಜೆಂಟ್‌ಗಳನ್ನು ಭೇಟಿಯಾದೆ. ನನ್ನ ವಂಶ ಪರಂಪರಾಗತ ಮನೆಯನ್ನು ಮಾರುವ ಬಗ್ಗೆ ಹೇಳಿದೆ; ಒಂದಿಬ್ಬರಿಗೆ ಮನೆಯನ್ನು ಸಹ ತೋರಿಸಿದೆ. ಒಬ್ಬೊಬ್ಬರು ಒಂದೊಂದು ಬೆಲೆಯನ್ನು ಹೇಳಿದರು.

ಸಂಜೆ ಅಮ್ಮ ಹಿರಿಯ ನಾಗರಿಕರ ಕ್ಲಬ್ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವುದಿತ್ತು. ನಾನೂ ಅಮ್ಮನೊಂದಿಗೆ ಹೋದೆ. ಅಮ್ಮ ಕಾರ್ಯಕ್ರಮದಲ್ಲಿ ವಯೊಲಿನ್ ನುಡಿಸುವವಳಿದ್ದಳು, ಅಮ್ಮನಿಗೆ ಸಹಾಯ ಮಾಡಲು ಅವಳ ವಯೊಲಿನ್ ಹಿಡಿದು ಅವಳೊಂದಿಗೆ ಹೋದೆ.

ಕ್ಲಬ್‌ನ ಸಂಸ್ಥಾಪಕರು ನನ್ನನ್ನು ತುಂಬಾ ಆತ್ಮೀಯವಾಗಿ ಸ್ವಾಗತಿಸಿದರು. ಅಮ್ಮನ ಈ ಎಲ್ಲಾ ಗೆಳತಿಯರು ಒಂದು ದಿನಕ್ಕೆ ಮೊದಲು ನಮ್ಮ ಮನೆಯ ಎದುರು 'ಹೋಮ್‌ಲೆಸ್ ಸೆಂಟರ್'ಗೆ ಹೋಗುವಾಗ ಭೇಟಿಯಾಗಿದ್ದರು, ಇಲ್ಲಿ ಅವರೆಲ್ಲರೂ ಇದ್ದರು. ನನ್ನ ಸೋದರತ್ತೆಯರು ಸಹ ಇದ್ದರು. ಇಂದು ಅವರು ಆಕರ್ಷಕ ಉಡುಗೆಗಳಲ್ಲಿ ಅಂದರೆ ಸ್ಕರ್ಟ್, ಮಿಡಿ, ಕೊರಳಿಗೆ ಸ್ಕಾರ್ಫ್ ಹಾಕಿಕೊಂಡು ಎಲ್ಲರ ಗಮನವನ್ನು ಸೆಳೆಯುತ್ತಿದ್ದರು. ಎಲ್ಲರೂ ತಮ್ಮ ಸುಕ್ಕು ಮುಖಕ್ಕೆ ಮೇಕಪ್ ಮಾಡಿಸಿಕೊಂಡಿದ್ದರು. ಅವರ ತುಟಿಗಳಿಗೆ ಲಿಪ್‌ಸ್ಟಿಕ್, ಕಣ್ಣುಗಳಿಗೆ ಕಾಡಿಗೆ ಮತ್ತು ಕೊರಳು–ಕಿವಿ–ಅಂಗೈಗಳಲ್ಲಿ ಆಭರಣಗಳಿದ್ದವು. ಅವರು ತಮ್ಮ ಚಿರಪರಿಚಿತ ಮುಗುಳ್ನಗೆಯನ್ನು ಸೂಸದಿದ್ದರೆ, ಅವರನ್ನು ಗುರುತಿಸುವುದು ಸಾಧ್ಯವಿರಲಿಲ್ಲ. ನನ್ನಿಬ್ಬರು ಸೋದರತ್ತೆಯವರು ಬಂದು ನನ್ನನ್ನು ಸ್ನೇಹದಿಂದ ತಬ್ಬಿಕೊಂಡರು.

ಒಂದು ಹೋಟೆಲ್‌ಗೆ ಊಟಕ್ಕೆ ಆರ್ಡರ್ ಮಾಡಲಾಗಿತ್ತು. ಸುಂದರ ಕಾರ್ಯಕ್ರಮವಿತ್ತು. ಯುವ ನರ್ತಕಿಯೊಬ್ಬಳು ಸ್ಪಾನಿಷ್ ಫ್ಲಾಮೆಂಕೊ ಡ್ಯಾನ್ಸ್ ಮಾಡಿದಳು. ಆ ಯುವತಿ ವೃದ್ಧೆಯರ ಸಭೆಯಲ್ಲಿ ಇನ್ನಷ್ಟು ತರುಣಿಯಂತೆ ತೋರುತ್ತಿದ್ದಳು. ನರ್ತಕಿಯ ನೃತ್ಯದ ನಂತರ ಅಮ್ಮ ಸ್ಟೇಜ್‌ಗೆ ಹೋದಳು. ಅಮ್ಮ ಸ್ಟೇಜ್‌ನಲ್ಲಿ ವಯೊಲಿನ್ ನುಡಿಸುವುದನ್ನು ನೋಡಿ ನಾನು ಹಳೆಯ ನೆನಪುಗಳಲ್ಲಿ ಕಳೆದುಹೋದೆ. ಅವಳು ವಯೊಲಿನ್ ನುಡಿಸುವಾಗ ತುಂಬಾ ಸುಂದರವಾಗಿ ಕಾಣುತ್ತಿದ್ದಳು. ಮನೆಯಲ್ಲಿ ಒಮ್ಮೆಲೆ ಮಧುರ ಸಂಗೀತ ಪ್ರತಿಧ್ವನಿಸುತ್ತಿತ್ತು. ಸಹೋದರಿ–ಸಹೋದರರಾದ ನಾವು ನಮ್ಮ ನಮ್ಮ ಕೋಣೆಯಿಂದ ಹೊರ ಬಂದು ಪಾರ್ಲರ್‌ಗೆ ಹೋಗುತ್ತಿದ್ದೆವು. ಅಮ್ಮ ವಯೊಲಿನ್ ನುಡಿಸುವ ದೃಶ್ಯವನ್ನು ಕಣ್ತುಂಬಿಸಿಕೊಳ್ಳುತ್ತಿದ್ದೆವು.

ನನ್ನ ಅಮ್ಮ ಓರ್ವ ಉದ್ಯೋಗಸ್ಥ ಮಹಿಳೆಯಾಗಿರಲಿಲ್ಲ, ಆದರೆ ನಾನು ಅಮ್ಮ ಸದಾ ಕಾರ್ಯಮಗ್ನಳಾಗಿರುವುದನ್ನು ನೋಡಿದೆ. ಅವಳು ಮನೆಯ ಜವಾಬ್ದಾರಿಯನ್ನು ಹೊತ್ತು, ನಾಲ್ಕು ಮಕ್ಕಳನ್ನು ಬೆಳೆಸಿದ್ದಳು. ಅವಳು ಬಿಡುವಿನ ಕ್ಷಣಗಳಲ್ಲಿ ಒಂದು ಕಪ್ ಕಾಫಿಯೊಂದಿಗೆ ವಯೊಲಿನ್ ನುಡಿಸುತ್ತಿದ್ದಳು. 'ವಯೊಲಿನ್ ನುಡಿಸುವುದು ನನಗೆ ವಿಶ್ರಾಂತಿಯಿದ್ದಂತೆ' ಎಂಬುದು ಅವಳ ಹೇಳಿಕೆಯಾಗಿತ್ತು. ಆಗಾಗ ಅಪ್ಪ ಸಹ ತಮ್ಮ ಟೆನ್ಷನ್ ದೂರ ಮಾಡಿಕೊಳ್ಳಲು ಅಮ್ಮನಿಗೆ ವಯೊಲಿನ್ ನುಡಿಸುವಂತೆ ಹೇಳುತ್ತಿದ್ದರು. ಅಪ್ಪ ಕೈಯಲ್ಲಿ ರಮ್ ಗ್ಲಾಸ್ ಹಿಡಿದು ಮೌನವಾಗಿ ಕೂತು ಅಮ್ಮನ ವಯೊಲಿನ್ ಆಲಿಸುತ್ತಿದ್ದರು. ಇಂದು ಸ್ಟೇಜಿನಲ್ಲಿ ಈ ವಯಸ್ಸಿನಲ್ಲಿ ಅಮ್ಮ ವಯೊಲಿನ್ ನುಡಿಸುವುದನ್ನು ನೋಡಿ ನನಗೆ ಅತೀವ ಸಂತಸವಾಯಿತು. ಇನ್ನು ಹತ್ತು ವರ್ಷ ಅಮ್ಮನ ಬಗ್ಗೆ ಯೋಚಿಸುವ ಅಗತ್ಯವಿಲ್ಲವೆಂದು ನನಗೆ ಅನ್ನಿಸಿತು. ನನ್ನ ಅಮ್ಮ ತುಂಬಾ ಆರೋಗ್ಯವಂತಳಾಗಿದ್ದಾಳೆ.

ಇಡೀ ಕಾರ್ಯಕ್ರಮವನ್ನು ನೋಡಿ ನಾನು ಪ್ರಭಾವಿತನಾದೆ. ಸಂಸ್ಥೆಯ ಸಂಸ್ಥಾಪಕರಿಗೆ ಕಾರ್ಯಕ್ರಮದ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದೆ. ಸಂಸ್ಥೆಯ ಅಧ್ಯಕ್ಷರು ನನಗೆ ಸಲಹೆಯಿತ್ತರು, 'ನೀವು ಬಯಸಿದರೆ ಕ್ಲಬ್ ಸದಸ್ಯರಾಗಬಹುದು'. ನನಗೆ ಅವರ ಮಾತು ಹಿಡಿಸಲಿಲ್ಲ. ನನಗೆ ಸೀನಿಯರ್ ಸಿಟಿಜನ್ ಸದಸ್ಯನಾಗುವಷ್ಟು ವಯಸ್ಸಾಗಿದೆಯೇ ಎಂದು ಯೋಚಿಸಿದೆ. ಅಧ್ಯಕ್ಷರು ಹೇಳಿದರು, 'ಹಾಗಂತ ಅರವತ್ತರ ಮೇಲಿನವರು ಇದಕ್ಕೆ ಸದಸ್ಯರಾಗಲು ಅರ್ಹರು, ಆದರೆ ನಾವು ವಿಶೇಷ ಸಂದರ್ಭಗಳಲ್ಲಿ ಐವತ್ತರ ಮೇಲಿನವರನ್ನು ಸಹ ಸದಸ್ಯರಾಗಿ ತೆಗೆದುಕೊಳ್ಳುತ್ತೇವೆ.'

ನಾನು ಕಳವಳಗೊಂಡೆ. ಸೀನಿಯರ್ ಸಿಟಿಜನ್! ನಾನು ಸೀನಿಯರ್ ಸಿಟಿಜನ್ ವರ್ಗಕ್ಕೆ ಬರುತ್ತಿದ್ದೇನೆ! ಜನ ನನಗೆ ಸೀನಿಯರ್ ಸಿಟಿಜನ್ ಕ್ಲಬ್‌ನ ಸದಸ್ಯತ್ವವನ್ನು ಪಡೆಯುವ ಸಲಹೆಯನ್ನು ಕೊಡುತ್ತಿದ್ದಾರೆ. ನನ್ನ ಅಮ್ಮ ಮತ್ತು ನನಗಿರುವ ವ್ಯತ್ಯಾಸವಾದರೂ ಏನು?

ನಾನು ಉತ್ಸಾಹದಿಂದ ಅಮ್ಮನ ಕಾರ್ಯಕ್ರಮಕ್ಕೆ ಹೋಗಿದ್ದೆ, ಆದರೆ ಭಾರವಾದ ಮನಸ್ಸಿನಿಂದ ಮನೆಗೆ ಮರಳಿ ಬಂದೆ. ಮರುದಿನ ಸಹ ತನ್ನ ಕಾರ್ಯಕ್ರಮವಿರುವುದಾಗಿ ಅಮ್ಮ ಹೇಳಿದಾಗ ನಾನು ಮುಗುಳ್ನಗುತ್ತಾ ಹೇಳಿದೆ, 'ಅಮ್ಮಾ, ನನಗೆ ನಿನ್ನ ಜೀವನವೇ ಅತ್ಯಂತ ಸುಂದರ!'

ಅಮ್ಮ ಸ್ನೇಹದಿಂದ ನನ್ನೆರಡೂ ಕೈಗಳನ್ನು ಹಿಡಿದು ಹೇಳಿದಳು, 'ಪಾಲ್, ನಾನು ಬದುಕಲು ಒಂದು ದಿನಚರಿ ಮತ್ತು ಹಾದಿಯನ್ನು ಆಯ್ಕೆ ಮಾಡಿಕೊಂಡೆ, ಸದಾ ವ್ಯಸ್ತಳಾಗಿರುತ್ತೇನೆ, ಆದರೆ ನಿಜ ಸಂಗತಿಯೆಂದರೆ ನಾನು ಈ ಕೋಟೆಯಲ್ಲಿ ಒಂಟಿಯಾಗಿರುತ್ತೇನೆ.' ಅಮ್ಮ ಮನೆಯ ಸುತ್ತಮುತ್ತ ತನ್ನ ದೃಷ್ಟಿ ಹರಿಸಿದಳು.

'ಡಿಯರ್ ಮದರ್, ನಾನೂ ಒಂಟಿಯಾಗಿರುತ್ತೇನೆ.'

'ಇದರಲ್ಲಿ ವ್ಯತ್ಯಾಸವಿದೆ... ನಿನ್ನ ಒಂಟಿತನ ನಿನ್ನ ಆಯ್ಕೆಯಾಗಿದೆ, ನನ್ನ ಒಂಟಿತನ ನನ್ನ ಅಸಹಾಯಕತೆಯಾಗಿದೆ.'

'ಅಮ್ಮಾ, ನನ್ನ ಒಂಟಿತನ ಸಹ ಒಂದು ಅಸಹಾಯಕತೆಯೇ. ವ್ಯತ್ಯಾಸವೆಂದರೆ, ನನ್ನ ಮತ್ತು ನಿನ್ನ ಅಸಹಾಯಕತೆಯ ಅರ್ಥಗಳು ಬೇರೆ ಬೇರೆಯಾಗಿವೆ.'

ನನ್ನ ಮುಗ್ಧ ತಾಯಿ ನನ್ನ ಮಾತುಗಳಿಗೆ ಬೇರೊಂದು ಅರ್ಥವನ್ನು ಕಲ್ಪಿಸಿಕೊಂಡು ಹೇಳಿದಳು, 'ನಿನಗೆ ಗೊತ್ತಿದೆ... ಮರ್ಫಿ ಪರಿವಾರದ ಹುಡುಗಿಯರಿಗೆ... ಅದೇ ಐದು ಜನ ಹುಡುಗಿಯರ